Rega No M 1229 | 43rd Year | Sri 'Satyavadi' Mysore | 30—4—1959

dec 44
T.P-2

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

Protectthe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಸಂಸ್ಥಾಪಕರು— ಅಂಬಳೆ ಸಿಂಸ್ಕೋದಾರ್ ಎಂ. ವಿ ಸುಬ್ಬರಾಯರು [ಬಿಡಿ ಪ್ರತಿ 3ಪೈ

ಭಾರತ ಸರ್ಕಾರದ ವಶಕ್ಕೆ ಕೋಲಾರದ ಚಿನದ ಗಣಿ

ಶಿಬಿರ ಪ್ರಾರಂಭ

ಮೈಸೂರು 30 — ಮೈಸೂರಿನಲ್ಲಿ ನಡೆಯುವ ರಾಷ್ಟ್ರೀಯ ಕ್ರೈತರ ಸಮ್ಮೇಳನದ 5 ನೇ ಅಧಿವೇಶನದ ಸಂದರ್ಭದಲ್ಲಿ ಸ್ವಯಂಸೇವಕರ ಶಿಬಿರದ ಪ್ರಾರಂಭೋತ್ಸವ ಈ ಬೆಳಿಗ್ಗೆ ವಸ್ತುಪ್ರದರ್ಶನ ಕಟ್ಟಡದಲ್ಲಿ ನೆರವೇರಿತು. ಭಾರತ ಸರಕಾರದ ವ್ಯವಸಾಯ ಮಂತ್ರಿ ಡಾ|| ಪಂಜಾಬ್‌ರಾವ್‌ದೇಶಮುಖರು ರಾಷ್ಟ್ರ ಧ್ವಜಾರೋಹಣ ಮಾಡಿದರು.

ಉಕ್ಕಿನ ಕಾರ್ಖಾನೆ ಸ್ಥಾಪನೆ ಬಗ್ಗೆ

ವಿಶ್ವ ಬ್ಯಾಂಕಿನ ತಜ್ಞರೋರ್ವರಾದ ಲಿ ಜಿಸ್ಟ್ಕಾ ಪ್ರಕಟಿಸಿರುವಂತೆ ಉಕ್ಕಿನ ಕಾರ್ಖಾನೆಸ್ಥಾಪಿಸುವ ಕುರಿತು ಪರಿಶೀಲಿಸುತ್ತಿದ್ದಾರೆ.

ಹೊತೋಟಿಯಲ್ಲಿ

ಹೊಸಪೇಟೆಯಲ್ಲಿ ರಂಜಾನಿನ ಸಂದರ್ಭದಲ್ಲಿ ದೊಂಬಿ ಆದುದು ಈಗ ಹದದ್ದರುವುದಾಗಿ ಮುಖ್ಯ ಮಂತ್ರಿ ಶ್ರೀ ಬಿ. ಡಿ ಜತ್ತಿಯವರು ನಿನ್ನೆ ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ಶಿಕ್ಷಣ ಸಪ್ತಾಹ

ಈ ವೇ 22 ರಿಂದ ಮೈಸೂರು ರಾಜ್ಯಾಂಕದಲ್ಲಿ ಶಿಕ್ಷಣ ಸಪ್ತಾಹ ನಡೆಯುವುದು ರೂ 3 ಲಕ್ಷ ವೆಚ್ಚದಲ್ಲಿ ಲಕ್ಷ ಮಂದಿ ಹರಿಜನರು ಮತ್ತು ಗುಡ್ಡಗಾಡಿನವರ ಮಕ್ಕಳನ್ನು ಶಾಲೆಗೆ ತರಲಾಗುವುದು.

ನಿರಾಕರಣೆ

ಪಿಕಿಂಗ್ 29 — ಭಾರತಕ್ಕೆ ಭೇಟಿಕೊಟ್ಟು ಪಲಾಯಿ ಲಾಮಾನ್ನು ಸಂದರ್ಶಿಸಬೇಕೆಂದು ಪಂ|| ನೆಹರು ಕಳಿಸಿದ ಆಹ್ವಾನವನ್ನು ಪಂಚೆನ್‌ಲಾಮಾ ತಿರಸ್ಕರಿಸಿ, ದಲಾಯಿ ಲಾಮಾ ಒಲಾತ್ಯಾಗವಾಗಿ ಅಪಹರಿಸಲ್ಪಟ್ಟರು ಎಂದು

ಸಂಧಾನ ಮಾತುಕತೆ

ಬೆಂಗಳೂರು 29 — ರಾಜಕೀಯ ದಲ್ಲಿ ನೊಂದವರ ಸತ್ಯಾಗ್ರಹ ನಿಲ್ಲಿಸುವ ಬಗ್ಗೆ ಕೋಲಾರ ಕಾಂಗ್ರೆಸು ನಾಯಕರು ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರನ್ನು ಭೇಟಿಮಾಡಿದ್ದರು

ಸೆಲೆಕ್ಟ್ ಸಮಿತಿಗೆ

ನವ ದೆಹಲಿ 29 — ಮೈಸೂರು ಬೀಂಕು ಮತ್ತಿತರ 7 ಬ್ಯಾಂಕುಗಳನ್ನು ಸ್ಟೇಟ್ ಬ್ಯಾಂಕಿಗೆ ತೆಗೆದುಕೊಳ್ಳುವ ಮಸೂದೆ ಜಂಟಿ ಸೆಲೆಕ್ಟ್ ಸಮಿತಿಗೆ ಪರಿಶೀಲನೆಗೆ ಹೋಯಿತು.

ಪ್ರತ್ಯೇಕ ಅಂಚೆ ಸರ್ಕಲ್

ಚಿತ್ರದುರ್ಗ 29 — ಕರ್ನಾಟಕಕ್ಕೆ ಬೇಗನೆ ಪ್ರತ್ಯೇಕ ಅಂಚೆ ಸರ್ಕಲ್ ಆಗುವದಾಗಿ ಮುದ್ರಾಸು ಪೋಸ್ಟ್ ಮಾಸ್ಟರ್ ಜನರಲ್ ಶ್ರೀ ಅನಂತಕೃಷ್ಣನರು ತಿಳಿಸಿದ್ದಾರೆ.

ಕೇಂದ್ರದ ಆಹ್ವಾನ

ಭಾರತ ಸರ್ಕಾರವು ತಯಾರಿಸುತ್ತಿರುವ ಗಜೆಟಿಯರ್ ವಿಷಯ ಚರ್ಚಿಸಲು ಮೈಸೂರು ರಾಜ್ಯದ ಯುವಜನ ಬಳಗದ ಅಧ್ಯಕ್ಷ ಪ್ರೊ|| ಆರ್. ಗುರುರಾಜರವರನ್ನು ಆಹ್ವಾನಿಸಿದೆ.

ಮದರಾಸಿನ ಮೇಯರ್

ಮದ್ರಾಸು 29 — ದ್ರವಿಡ ಮುನ್ನೇತ್ರ ಕಳಗಂನ ಶ್ರೀ ಎ ಪಿ. ಅರಸು ಈ ದಿನ ಮದರಾಸು ಮೇಯರರಾಗಿ ಆಯ್ಕೆ ಆದರು

ಮಾನವ ನಾಶಕ್ಕೆ ಸಾಕು

ಅಮೇರಿಕಾ ಬಳಿ 75 ಶತಕೋಟಿ ಅಣು ಆಯುಧಗಳಿವೆ ಪ್ರಪಂಚದ ಮಾನವರನ್ನು ನಾಶಮಾಡಲು ಎಷ್ಟು ಬೇಕೊ ಅದಕ್ಕೆ 20 ರಷ್ಟಿದೆ

ನವ ದೆಹಲಿ 29 — ಅರ್ಥ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ಲೋಕ ಸಭೆಯಲ್ಲಿ ಹೇಳಿಕೆಯಿತ್ತು, ಮೈಸೂರು ಭಂಗಾರದ ಇಡೀ ಉತ್ಪಾದನೆಯನ್ನು ಅಧಿಕೃತ ದರದಲ್ಲಿ ವಶಪಡಿಸಿಕೊಳ್ಳಲು ಭಾರತ ಸರ್ಕಾರ ವಶಮಾಡಿಕೊಳ್ಳಲು ನಿರ್ಧರಿಸಿದೆ ಎಂದರು. ದೇಶದ ರಿಸರ್ವ್ ಗಳ ಭದ್ರತೆಗೆ ಈ ಕ್ರಮ ಕೈಗೊಂಡಿದೆ ಎಂದರು

ಇಂದಿರಾರ ಹೇಳ್ಕೆ

ಕ್ವಿಲಾನ್ 29 — ಕೇರಳಕ್ಕೆ ಸಹಾಯ ಕೊಡುವದರಲ್ಲಿ ಕೆಲವು ವಿಷಯಗಳಲ್ಲಿ ಕೇಂದ್ರ ಸರ್ಕಾರ ದಾರಿತಪ್ಪಿ ಹೋಗುತ್ತಿದೆ ಎಂದು ಕಾಂಗ್ರೆಸು ಅಧ್ಯಕ್ಷೆ ಶ್ರೀಮತಿ ಇಂದಿರಾಗಾಂಧಿ ತಿಳಿಸಿದರು

ಪತ್ರಿಕೆಗಳು ನಿಂತವು

ಮದರಾಸು 29 — ಮದರಾಸಿನಲ್ಲಿ ತಕ್ಷಣದಿಂದಲೇ ಇಂಡಿಯನ್ ಎಕ್ಸ್‌ಪ್ರೆಸ್, ಸಂಡೆ ಸ್ಟ್ಯಾಂಡರ್ಡ್, ದಿನಮಣಿ ದಿನಮಣಿ ಕಾದಿಂ, ಅಂಧ್ರ ಪ್ರಭ ಮತ್ತು ಸ್ಕ್ರೀನ್ ಪ್ರಕಟಣೆ ನಿಲ್ಲಿಸುವದಾಗಿ ಅಡಳಿತ ವರ್ಗ ಪ್ರಕಟಿಸಿದೆ

ನವದೆಹಲಿ 28— ಟಿಬೆಟ್ಟಿನ ಮಠಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸಂಸ್ಕೃತ ಪಾಗೂ ಇತರ ಭಾಷೆಯಲ್ಲಿ ಬರೆಯಲಾದ ಹಸ್ತಪ್ರತಿಗಳಿವೆಯೆಂದು ನಂಬಲಾಗಿದೆ — ಇಂತಹ ಹಸ್ತಪ್ರತಿಗಳನ್ನು ಪರೀಕ್ಷಿಸಲು ಟಿಬೆಟ್ಟಿಗೆ ಕೆಲವು ವಿದ್ವಾಂಸರನ್ನು ಕಳುಹಿಸುವ ವಿಷಯವನ್ನು ಸಧ್ಯಕ್ಕೆ ಮುಂದುವರಿಸಲಾಗಿದೆ ಎಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ವಿವಿಧ ವರ್ತಮಾನ

ಪೃಥ್ವಿನು ಸೋವಿಯತ್ ವಿಶ್ವಾಕಾಶ ಬಾಣವನ್ನು ಹಾರಿಸಿ 100 ದಿನಗಳಿಗಿಂತಲೂ ಹೆಚ್ಚು ಸಮಯವಾಗಿದೆ ; ಈ ಅವಧಿಯಲ್ಲಿ ಈ ಕೃತಕ ಗ್ರಹವು ಸೂರ್ಯನ ಸುತ್ತಲೂ 25 ಕೋಟಿ ಕಿಲೋಮೀಟರು ಪ್ರಯಾಣವನ್ನು ಮುಗಿಸಿದೆ — ಈಗ ಈ ಕೃತಕ ಗ್ರಹವು ಭೂಮಿಯಿಂದ 2 ಕೋಟಿ ಕಿಲೋಮೀಟರು ದೂರದಲ್ಲಿದೆ : ಚಂದ್ರನಿಗಿಂತಲೂ 60 - 70 ರಷ್ಟು ಹೆಚ್ಚು ದೂರದಲ್ಲಿದೆ ; ಈ ದೂರವು ಹೆಚ್ಚುತ್ತಾ ಹೋಗಿ, ವರ್ಷಾಂತ್ಯದ ವೇಳೆಗೆ 15 ಕೋಟಿ ಕಿಲೋಮೀಟರು ಆಗುವುದು : ನಮ್ಮಲ್ಲಿ ಶಕ್ತಿಯುತವಾದ ದೂರದರ್ಶಕ ಯಂತ್ರವಿದ್ದಿದ್ದರೆ ಕನ್ಯಾ, ಮಕರ, ತುಲಾ ರಾಶಿಗಳು ಅಡ್ಡಹಾಯುವೆಡೆಯಲ್ಲಿ ಈ ಕೃತಕ ಗ್ರಹವನ್ನು ಕಾಣಬಹುದು.

o o

ನವದೆಹಲಿ 29 — ಇಂಗ್ಲೀಷನ್ನು ಭಾರತದ ಅಧಿಕೃತ ಭಾಷೆಯನ್ನಾಗಿ ಇಟ್ಟುಕೊಂಡಿರಬೇಕೆಂದೂ, ಅದರ ಸ್ಥಾನದಲ್ಲಿ ಹಿಂದಿಯನ್ನು ಇಡಬೇಕೆಂಬ ಎಲ್ಲ ಪ್ರಯತ್ನಗಳನ್ನೂ ತ್ಯಜಿಸಬೇಕೆಂದೂ ಶ್ರೀ ರಾಜಗೋಪಾಲಾಚಾರಿ ಮತ್ತಿತರ 18 ಮಂದಿ ರಾಜ್ಯಸಭೆಯಿಂದ ಅರ್ಜಿಯನ್ನು ಮದರಾಸಿನ ಕಾಂಗ್ರೆಸ್ಸು ಸದಸ್ಯರೂ ಮತ್ತು ಅಧಿಕೃತ ಭಾಷಾ ಕಮಿಷನ್ನಿನ ಸದಸ್ಯರೂ ಆದ ಡಾ || ಪಿ. ಸುಬ್ಬರಾಯನ್ನರು ಲೋಕಸಭೆಯ ಮುಂದಿಟ್ಟರು.

o o

ನವದೆಹಲಿ 29— ಭಾರತ ಸರಕಾರ ಫ್ಯಾಕ್ಟರಿಗಳಿಂದ ಮಾಂಲ್ಪಡಲು 140000 ಟನ್ ಸಕ್ಕರೆಯನ್ನು ಬಿಡುಗಡೆಮಾಡಿದೆ.

ವಿವಿಧ ಸಮಾಚಾರ ವಿಮರ್ಶೆ

'ಯಸ್ಯ ಶ್ಯಾಮೋ ಲೋಹಿತಾಕ್ಷಃ .... ನೇತಾರಂ ಜೇತಾರಂ ಪಶ್ಯತಿ' ಕಪ್ಪು ಬಣ್ಣದ ಕೆಂಪು ಕಣ್ಣಿನ ದಂಡದೇವತೆಯು ದುಷ್ಟನಿಗ್ರಹಕ್ಕಾಗಿ ತಯಾರಾಗಿದ್ದಲ್ಲಿ ಜನತೆಯು ಮೋಕುಕೊಳ್ಳಲಾಗುವುದಿಲ್ಲ ! ಅಧರ್ಮ ಮಾರ್ಗದಲ್ಲಿ ಪ್ರವರ್ತಿಸುವುದಿಲ್ಲ ಅದರೆ ನೇತೃವು -- ಅಂದರೆ ದಂಡಧಾರಿ ಅಧಿಕಾರಿಯು, ವಿವೇಕಿಯಾಗಿ ದಂಡವನ್ನು ಉಪಯೋಗಿಸುವ ಸಂದರ್ಭವನ್ನು ಸರಿಯಾಗಿ ಅರಿತಿರುವವನಾಗಿರಬೇಕು, ಎಂದು ವೇದವ್ಯಾಸರು ಅಪ್ಪಣೆ ಕೊಡಿಸುತ್ತಿರುವರು.

ಆದರೆ ಇಂದಿನ ಪರಿಸ್ಥಿತಿಯು ಇದಕ್ಕೆ ತೀರಾ ವಿರುದ್ಧವಾಗಿದೆ, ಎಂದು ದೇಶ ಸಂತಾಪಗಳಿಂದ ಛಿನ್ನವಿಚ್ಛಿನ್ನವಿಲ್ಲದಂತಾಗಿದೆ. ನಮ್ಮ ಪ್ರಧಾನ ಅಮಾತ್ಯರೂ ಹಾಗೂ ಅವರ ಅನುಯಾಯಿ ಅಧಿಕಾರವರ್ಗದವರು ಹಲವಾರು ಘಟನಾದೃಶ್ಯವಾದ ಸ್ವತಂತ್ರ್ಯಕ್ಕೆ ವಿರುದ್ಧವಾದ ರೀತಿಯಿಂದ ಹಲವು ಕಡೆಗಳಲ್ಲಿ ಮುಸ್ಲಿಮರು, ಕ್ರಿಶ್ಚಿಯನರು, ವಿಷಯನರಿಗಳು ದಂಗೆ-ದರೋಡೆಗಳನ್ನು ನಡೆಸುತ್ತಿದ್ದರೂ, ಬಲಾತ್ಕಾರದಿಂದ ಮತಾಂತರೀಕರಣಗಳನ್ನು ನಡೆಸುತ್ತಿದ್ದರೂ, ಅಂತಹ ಅಕೃತ್ಯ ಕಾರ್ಯಗಳನ್ನು ಸಮೂಲವಾಗಿ ನಾಶಗೊಳಿಸುವುದಲು 'ಪಂಚಶೀಲ' ಗಳೆಂಬ ಆಕರ್ಷಕ ಶಬ್ದಗಳನ್ನು ಜಪಿಸುತ್ತಾ, ಅಂತಹ ಕಾರ್ಯಗಳಿಗೆ ಪ್ರೋತ್ಸಾಹವನ್ನೇ ಕೊಡುತ್ತಿರುವುದು ಬಲು ದುರ್ದೈವದ ಸಂಗತಿಯಾಗಿದೆ : ನಮ್ಮ ದೇಹದಲ್ಲೇ ಹುಟ್ಟಿದ ರೋಗವಾದರೂ ಸಕಾಲದಲ್ಲಿ ಪ್ರತೀಕಾರವನ್ನು ಮಾಡಿ, ಸಮೂಲ ವಿನಾಶಗೊಳಿಸದಿದ್ದಲ್ಲಿ ಬೆಳೆದು ಬಂದ ನಂತರ ಆ ರೋಗವು ಚಿಕಿತ್ಸೆಗೆ ಒಳಪಡದಂತಹ ದುಸ್ಥಿತಿಗೆ ಬಂದೊದಗುತ್ತದೆ : ಅಂತೆಯೇ ವಿರೋಧಿ ದುಷ್ಟ ಶಕ್ತಿಗೆ ಬೆದರಿ 'ಶಾಂತಿ' ಮಂತ್ರವನ್ನು ಪಠಿಸುತ್ತಾ, ಕುಳಿತಲ್ಲಿ ದುಷ್ಟಶಕ್ತಿಯು ಇನ್ನಷ್ಟು ಬೆಳೆದುಬಂದು, ಮುಂದಕ್ಕೆ ಅಪಾಯಕಾರಿಯಾಗುವುದರಲ್ಲಿ ಸಂದೇಹವಿಲ್ಲ ; ಮಂತ್ರಿಗಳ 'ಶಾಂತಿ ಮಂತ್ರ' 'ಪಂಚಶೀಲ' ಗಳನ್ನು ವಿರೋಧಿಗಳು ಅಶಕ್ತತೆಯು ಹೆಗ್ಗುರುತಗಳೆಂದು ಭಾವಿಸುವರಲ್ಲದೆ ಸದ್ಭಾವನೆಯಿಂದ ನೋಡುವರಿಲ್ಲ ! ಕಟುಕನ ಕೈಯಲ್ಲಾಗಿನ ಕತ್ತಿಯು ಮುಂದೆ ಕತ್ತನ್ನು ಬಾಗಿಸಿದ ಕುರಿಯು ದೀನತೆಯುಂತೆಯೇ ಆಗುವುದರಲ್ಲಿ ಸಂದೇಹವಿಲ್ಲ ! ಒಂದು ಭಾಗದಲ್ಲಿ ಪಾಕಿಸ್ತಾನಿಗಳು, ಮತ್ತೊಂದು ಭಾಗದಲ್ಲಿ ಚೈನಾದನರು, ಇನ್ನೊಂದು ಮಗ್ಗಲಲ್ಲಿ ಪೋರ್ಚುಗೀಸರು ಮುನ್ನುಗ್ಗಲು ಹವಣಿಸುತ್ತಿರುವರು ; ಇಂತಹ ದುರ್ಧರ ಪ್ರಸಂಗದಲ್ಲಿ 'ಶಾಂತಿಮಂತ್ರ' ವು ತಾರಕವಾಗಲಾರದು ; ಉತ್ತಿಷ್ಠತ ! ಜಾಗ್ರತ !! ಕಳ್ಳರು - ಕಟುಕರು ಗಡಿಯೊಳಗೆ ನುಗ್ಗುವ ಮೊದಲೇ, ಪ್ರತಿಭಟಿಸದೂರ ಶ್ರಮಿಸಬೇಕಲ್ಲದೆ, ಮನೆಯೊಳಗೆ ನುಗ್ಗುವಾಗಲೂ ಗೊಂಕೆ ಹೊಗಡೆಯುತ್ತಾ ಮಲಗಿದ್ದು, ಕೊಳ್ಳೆಹೊಡೆದು ಹೋದನಂತರ 'ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ' ಎಂಬ ಸೂಕ್ತಿಯನ್ನು ಮುಂದಿಟ್ಟು ಆತ್ಮಸಮರ್ಥನೆಯನ್ನು ಮಾಡಿಕೊಳ್ಳುವುದು ಪಂಡಿತಂ ಲಕ್ಷಣವಲ್ಲ ! [ಧರ್ಮಬೋಧ]

ನಾಳೆಯ ತುಂಬಾಂಗ

ಆಶ್ವಿ ಮಹಾವಿದ್ವಾನ್ ವೈದ್ಯಶಿರೋಮಣಿ 1 ನವಮಿ ಧನಿಷ್ಠ
ಸಂಪತ್ಕೃಷ್ಣಜೋಯಿಸರಿಂದ

ಸೂಚನೆ --- ನಾಳೆ ಸತ್ಯವಾದಿ ಕಚೇರಿಗೆ ರಜ ಇದೆ

Sri 'SATYAVADI' Daily

Oldest Newspaper in the State ; Splendid Advertiser

Advertisement Tariff

Casual	Rs 1-50 per inch
Contract above 100 inches	1-00
500	0-75

Column length 12½ inches; width 2 inches; 4 columns to a page.

The decision of the management is final in all matters.

Manager "**Satyavadi**", Chamarajpuram, Mysore

ಗೋಂಷ್ಟಣ್, ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ಪಡೆಯಲಿ



ಅಪೆರಾ— 26-4-59 ರಿಂದ

ಇಬ್ಬರು ಸಹೋದರಿಯರು ತಮಿಳು

ಪಾತ್ರ— ಜಮುನಾ ಗಣೇಶ್, ಸಾವಿತ್ರಿ, ಸಂಬಯ್ಯಾಂ, ಗಿರಿಜಾ, ದೊರೈರಾಜ್

ಪ್ರತಿದಿನ 3 ಆಟಗಳು

ವುಡ್‌ಲಾಂಡ್

Glorious 4th Week

ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನಿಸುವ ಚಿತ್ರ

ಅನಾದಿ

(ಹಿಂದಿ)

ತಾರಾಗಣ- ನೂತನ್, ರಾಜ್ ಕಪೂರ್
ಮೋತೀಲಾಲ್, ಶುಭಾ ಖೋಟೆ

SHAKTI

SUDHA

A Superb Tonic

ಎಲ್ಲಾ ವಿಧದ ಆಯುರ್ವೇದ ಔಷಧಗಳಿಗೂ

ಅಶೋಕಾ ಫಾರ್ಮಸಿ

ಕೃಷ್ಣರಾಜ ಬಜಾರ್ ಮೈಸೂರು

For Quality Printing

L. N. Press

Sivarampet, Mysore

Edited, Printed & Published by Dharma Prachara Nurala M S Krishna Rao, at the Satyavadi Press Chamarajapuram, Mysore